# ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ:: ಮೈಸೂರು ನಗರ ಸಾರಿಗೆ ವಿಭಾಗ:: ಮೈಸೂರು

ವಿಭಾಗೀಯ ನಿಯಂತ್ರಣಾಧಿಕಾರಿಯವರ ಕಛೇರಿ, ನೆಲ್ಸನ್ ಮಂಡೇಲಾ ರಸ್ತೆ, ಬನ್ನಿಮಂಟಪ, ಮೈಸೂರು – 570015, ದೂರವಾಣಿ ಸಂ. 0821-2494184

**ಸಂ/ಕರಾಸಾ/ಮೈನಸಾವಿ/ಸಂಚಾರ/ವಾಣಿಜ್ಯ/ಜಾಹೀರಾತು/ 1082 /2016-17** **ದಿ: 28.09.2016**

***ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ ಸಂಖ್ಯೆ:06/2016-17***

*(ಇ-ಪ್ರಕ್ಯೂರ್ ಮೆಂಟ್ ಮೂಲಕ ಮಾತ್ರ)*

**ವಿಷಯ**:-36 ವೋಲ್ವೋ (ನಗರ) ವಾಹನಗಳಲ್ಲಿ ಜಾಹೀರಾತು ಅಳವಡಿಸಲು ಪರವಾನಗಿದಾರರ ಆಯ್ಕೆಗಾಗಿ ಅಲ್ಪಾವಧಿ ಇ-ಟೆಂಡರ್ ಆಹ್ವಾನಿಸುವ ಬಗ್ಗೆ.

*~*~*~*~*

ಮೈಸೂರು ನಗರ ಸಾರಿಗೆ ವಿಭಾಗದ 36 ವೋಲ್ವೋ(ನಗರ) ವಾಹನಗಳಲ್ಲಿ ಕವಚದ ಮೇಲೆ ಮಾತ್ರ ಜಾಹೀರಾತು ಪ್ರದರ್ಶಿಸಲು ಆಸಕ್ತ ವ್ಯಕ್ತಿ/ ಏಜೆನ್ಸಿ/ ಕಂಪನಿಗಳಿಗೆ ಜಾಹೀರಾತು ಪ್ರದರ್ಶಿಸಲು ಪರವಾನಗಿ ಆಧಾರದ ಮೇಲೆ ಅನುಮತಿ ನೀಡಲು (ಎರಡು ವರ್ಷಗಳ ಅವಧಿಗೆ) ಆಸಕ್ತ ವ್ಯಕ್ತಿ/ಏಜೆನ್ಸಿ/ಕಂಪನಿಗಳಿಂದ ಅರ್ಜಿ ಆಹ್ವಾನಿಸಿ ಅಲ್ಪಾವಧಿ ಇ-ಟೆಂಡರ್ ಕರೆಯಲಾಗಿದೆ.

## ಸಾಮಾನ್ಯ ಷರತ್ತು ಮತ್ತು ನಿಬಂಧನೆಗಳು

1. ಅರ್ಹತಾ ಅಂಶಗಳು.
   ಅ.) ಬಿಡ್‌ದಾರರು ಕಂಪನಿಯ ನೋಂದಾವಣಿ ಪ್ರಮಾಣಪತ್ರ ಹೊಂದಿರಬೇಕು.
   ಆ.) ಕಂಪನಿಯ ವಿಳಾಸದ ಧೃಡೀಕೃತ ದಾಖಲಾತಿ ಹೊಂದಿರಬೇಕು.
   ಇ.) ಬಿಡ್‌ದಾರರು ಜಾಹಿರಾತು ಉದ್ಯಮದಲ್ಲಿ ಕನಿಷ್ಟ ಮೂರು(3) ವರ್ಷಗಳ ಅನುಭವ ಹೊಂದಿರಬೇಕು.
   ಈ.) ಬಿಡ್‌ದಾರರು ಹಿಂದಿನ ಮೂರು ವರ್ಷಗಳ ಅವಧಿಯಲ್ಲಿ ವಾರ್ಷಿಕ ಕನಿಷ್ಟ ಎರಡು(2) ಕೋಟಿ ವಹಿವಾಟು ಹೊಂದಿರಬೇಕು.
   ಉ.) ಬಿಡ್‌ದಾರರು ಬೆಂಗಳೂರು ಮಹಾನಗರ ಸಾರಿಗೆ, ಕರ್ನಾಟಕ ರಾಜ್ಯರಸ್ತೆ ಸಾರಿಗೆ ನಿಗಮ ಮತ್ತು ಇತರೆ ನಿಗಮಗಳಲ್ಲಿ Defaulter ಆಗಿರಬಾರದು.

ಇ-ಟೆಂಡರ್/ಹರಾಜಿನಲ್ಲಿ ಭಾಗವಹಿಸಲು ಇಚ್ಚಿಸುವ ಅರ್ಜಿದಾರರು ಷರತ್ತು ಹಾಗೂ ನಿಬಂಧನೆಗಳನ್ನು **http://eproc.karnataka.gov.in** ನಲ್ಲಿ ಡೌನ್ ಲೋಡ್ ಮಾಡಿಕೊಂಡು ಷರತ್ತುಗಳನ್ನು ಖಚಿತಪಡಿಸಿಕೊಂಡು ಭಾಗವಹಿಸಲು ತಿಳಿಸಿದೆ.

**ಇ-ಟೆಂಡರ್**

1. ಇ-ಟೆಂಡರ್ ವಿಚಾರಣೆಗೆ ಕಡೆಯ ದಿನಾಂಕ ಮತ್ತು ಸಮಯ:- 10/10/2016 ಸಮಯ : 13.00 ಗಂಟೆ
2. ಇ-ಟೆಂಡರ್ ಸ್ವೀಕರಿಸಲು ಕಡೆಯ ದಿನಾಂಕ ಮತ್ತು ಸಮಯ:- 11/10/2016 ಸಮಯ :13.00 ಗಂಟೆ
3. ಇ-ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ :- 13/10/2016 ಸಮಯ :15.00 ಗಂಟೆ

ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕ.ರಾ.ರ.ಸಾ.ನಿಗಮ, ಮೈಸೂರು ನಗರ ಸಾರಿಗೆ ವಿಭಾಗ(ಸಂಚಾರ ಶಾಖೆ), ನೆಲ್ಸನ್‌ಮಂಡೇಲಾ ರಸ್ತೆ, ಬನ್ನಿಮಂಟಪ, ಮೈಸೂರು ರವರನ್ನು ಸಂಪರ್ಕಿಸಲು ಕೋರಲಾಗಿದೆ. (ದೂ:-7760990752, 9916722462)

ಈ ಇ-ಟೆಂಡರ್/ಹರಾಜು ಪ್ರಕಟಣೆಯನ್ನು ಯಾವುದೇ ಕಾರಣ ನೀಡದೇ ಪುರಸ್ಕರಿಸುವ, ತಿರಸ್ಕರಿಸುವ, ಮಾರ್ಪಾಡು ಮಾಡುವ ಹಾಗೂ ರದ್ದುಪಡಿಸುವ ಹಕ್ಕನ್ನು ನಿಗಮವು ಕಾಯ್ದಿರಿಸಿಕೊಂಡಿದೆ.

ಸಹಿ/-

ವಿಭಾಗೀಯ ನಿಯಂತ್ರಣಾಧಿಕಾರಿ,

ಮೈಸೂರು ನಗರ ಸಾರಿಗೆ ವಿಭಾಗ